# ಸಾಮೂಹಿಕ ಕಲ್ಯಾಣ ಮಹೋತ್ಸವ ಸುದ್ದಿ

ಚಿತ್ರದುರ್ಗ, ಸೆ. 5 - ಶಿಕ್ಷಕ ವೃತ್ತಿ ಮಾಡಿ ರಾಷ್ಟ್ರದ ಗಮನಸೆಳೆದು ರಾಷ್ಟ್ರಪತಿಗಳಾಗಿ ಸೇವೆ ಸಲ್ಲಿಸಿದ ರಾಧಾಕೃಷ್ಣನ್‌ರವರು ಗುರು ಸಮುದಾಯಕ್ಕೆ ಕಳಶಪ್ರಾಯರಾದವರು. ಅನೇಕರು ರಾಜಕಾರಣಿಗಳು ಉದ್ಯಮಿಗಳು ಆಗುತ್ತಾರೆ. ಆದರೆ ರಾಧಾಕೃಷ್ಣನ್ ಅವರಂತೆ ಆಗುವುದು ಬಹಳ ವಿರಳ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಅಭಿಪ್ರಾಯಿಸಿದರು.

ನಗರದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಮತ್ತು ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ ಸಹಯೋಗದಲ್ಲಿ ನಡೆದ ಮೂವತ್ತೊಂದನೇ ವರ್ಷ ಒಂಬತ್ತನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವ ಮತ್ತು ಶಿಕ್ಷಕ ದಿನಾಚರಣೆಯ ಅಧ್ಯಕ್ಷತೆ ವಹಿಸಿ, ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಮಾತನಾಡಿದ ಶ್ರೀಗಳು, ಅಕ್ಷರ ಕಲಿಸಿದಾತ ಗುರು. ಅಕ್ಷರದೊಳಗಿನ ಅರ್ಥವನ್ನು ಹೇಳುವಾತ ಮಹಾಗುರು. ಸಿದ್ಧಾಂತವು ಗುರುವಿನ ಗುರು. ತಲೆಯೊಳಗೆ ಒಂದು ತಲೆ ಇದೆ. ಅದುವೆ ಮೆದುಳು. ಅದಕ್ಕೆ ಸಾಕ್ಷಿಯಾದವರು ಬಸವಣ್ಣ, ಅಂಬೇಡ್ಕರ್, ಗಾಂಧೀಜಿ ಮೊದಲಾದವರು ಎಂದು ಸ್ಮರಿಸಿದರು.

ಪ್ರತಿಯೊಬ್ಬರು ಮನೆಯಲ್ಲಿದ್ದುಕೊಂಡೆ ಜ್ಞಾನದ ಬಲದಿಂದ ದೊಡ್ಡಶಕ್ತಿಯಾಗಬಹುದು. ಊರಿಗೆ, ಕೇರಿಗೆ, ಸಮಾಜಕ್ಕೆ ಪ್ರಕಾಶವಾಗಬಹುದು. ಆ ಹಿನ್ನೆಲೆಯಲ್ಲಿ ಪ್ರತಿಯೊಬ್ಬರು ದಿವ್ಯಶಕ್ತಿಯನ್ನು ಸಚೇತನಗೊಳಿಸಿಕೊಳ್ಳಬೇಕು. ಅರಿವಿನ ಗುರು ಜಾಗೃತವಾಗದಿದ್ದರೆ ಸಿದ್ಧಾಂತವೇ ಗುರು. ಸೈದ್ಧಾಂತಿಕ ಸಾಕ್ಷಾತ್ಕಾರವಾಗದಿದ್ದರೆ ತನ್ನ ಅಂತಃಸಾಕ್ಷಿಯೇ ಗುರು. ಸದ್ಗುರು, ಸತ್ಕಾರ್ಯ, ಸತ್ಕೀರ್ತಿಗೆ ಸದಾ ಗುರು ನೋಡಾ. ಪ್ರತಿಯೊಬ್ಬರು ಅಕ್ಷರ ಸಂಸ್ಕೃತಿಗೆ ಒಳಗಾಗಬೇಕು. ಆಗ ಸಮಾಜದ ಉದ್ಧಾರ ಸಾಧ್ಯ. ಶೋಷಿತರ ಹಕ್ಕುಗಳಿಗೆ, ಸ್ತ್ರೀ ಸಮಾನತೆಗೆ ಮನೆಬಿಟ್ಟು ಬಂದ ಬಸವಣ್ಣನವರು ಅನೇಕ ಅವಮಾನ ಅನುಭವಿಸಿದರು ಎಂದರು.

ಗೌರವ ಉಪಸ್ಥಿತಿ ವಹಿಸಿದ್ದ, ಧಾರವಾಡ ಜಿಲ್ಲೆ ಬೀರವಳ್ಳಿಯ ಶ್ರೀಗುರು ಮಾತಾ ನಂದಾತಾಯಿ ಮಾತನಾಡಿ, ಭಾರತ ಕಂಡ ಅಪರೂಪದ ವ್ಯಕ್ತಿಗಳು ಮುರುಘಾ ಶರಣರು. ನಾನು ಸಹ ಶೋಷಿತ ಸಮುದಾಯದಿಂದ ಬಂದಿದ್ದೇನೆ. ಕರ್ನಾಟಕದಲ್ಲಿ ಅನೇಕ ಮಠಗಳಿವೆ. ಆದರೆ ಶ್ರೀಮಠವು ಎಲ್ಲ ಜಾತಿ ಜನಾಂಗದವರಿಗೆ ಅವಕಾಶ ಕೊಟ್ಟಿರುವುದು ವಿಶೇಷ. ಅನೇಕರು ಇಲ್ಲಿ ವಿವಾಹವಾಗಿದ್ದು, ಎಲ್ಲರೂ ಉತ್ತಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಶ್ರೀಮಠದ ಪ್ರಸಾದವನ್ನು ತೆಗೆದುಕೊಂಡವರು ಇಂದು ಎಲ್ಲರೂ ಸುಖೀ ಜೀವನ ಸಾಗಿಸುತ್ತಿದ್ದಾರೆ ಎಂದು ಹೇಳಿದರು.

ಮುಖ್ಯಅತಿಥಿ ದಾವಣಗೆರೆ ಜಿಲ್ಲಾ ಶೋಷಿತ ವರ್ಗಗಳ ಒಕ್ಕೂಟದ ಅಧ್ಯಕ್ಷ ಬಾಡದ ಆನಂದರಾಜ್ ಮಾತನಾಡಿ, ಮುರುಘಾಮಠವು ರಾಜ್ಯದಲ್ಲಿ ವಿಭಿನ್ನ ಮಠವಾಗಿದೆ. ಹಿಂದುಳಿದವರನ್ನು, ಶೋಷಿತರನ್ನು, ವಿಶೇಷಚೇತನರನ್ನು ಪ್ರೀತಿಸುವ ಮಠವಾಗಿದೆ. ಜನಮಾನಸದಲ್ಲಿ ಮುರುಘಾ ಶರಣರು ಪ್ರೀತಿಪಾತ್ರರಾಗಿದ್ದಾರೆ. ನೆಲಕಚ್ಚಿದ ಸಮುದಾಯಗಳಿಗೆ ಸ್ವಾಮಿಗಳನ್ನು ನೀಡಿದವರು, ಸಾವಿರಾರು ಸಾಮೂಹಿಕ ಕಲ್ಯಾಣ ಮಾಡಿಸಿದಂತಹ ಶರಣರನ್ನು ಇಡೀ ಸಮಾಜ ಗೌರವಿಸುತ್ತದೆ ಎಂದರು.

ಈ ಸಂದರ್ಭದಲ್ಲಿ 9 ಜೋಡಿಗಳ ವಿವಾಹ ನೆರವೇರಿತು. ಹೆಬ್ಬಾಳು ರುದ್ರೇಶ್ವರ ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮಿಗಳು, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಎನ್.ತಿಪ್ಪಣ್ಣ, ಪೈಲ್ವಾನ್ ತಿಪ್ಪೇಸ್ವಾಮಿ ಮೊದಲಾದವರಿದ್ದರು.

ಜಮುರಾ ಕಲಾವಿದರು ಪ್ರಾರ್ಥಿಸಿದರು. ಬಸವಾದಿತ್ಯ ದೇವರು ಸ್ವಾಗತಿಸಿದರು. ಉಪನ್ಯಾಸಕ ಮಾರುತಿ ನಿರೂಪಿಸಿದರು.







ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್
ಮೂವತ್ತೊಂದನೇ ವರ್ಷದ ಒಂಬತ್ತನೇ ತಿಂಗಳ
ಸಾಮೂಹಿಕ ಕಲ್ಯಾಣ ಮಹೋತ್ಸವ
ಮತ್ತು ಶಿಕ್ಷಕರ ದಿನಾಚರಣೆ
ಸಮಯ : ಬೆಳಗ್ಗೆ 10.30 ಸ್ಥಳ : ಅನುಭವ ಮಂಟಪ


ಮೂವತ್ತೊಂದನೇ ವರ್ಷದ ಒಂಬತ್ತನೇ ತಿಂಗಳ
ಸಾಮೂಹಿಕ ಕಲ್ಯಾಣ ಮಹೋತ್ಸವ
ಮತ್ತು ಶಿಕ್ಷಕರ ದಿನಾಚರಣೆ